

ಸೆನೆಟ್ ಸ್ಕ್ವೇರ್



ಪೈನ್ ಕೋನ್‌ನಿಂದ ತಯಾರಿಸಿದ ಕಲಾಕೃತಿ

ಕಟ್ಟಡವನ್ನು ದಾಟಿ ಹೋಗಬೇಕು. ಹಿಂದೆ ಇದು ಸೈನಿಕರ ವಾಸಸ್ಥಾನ, ಆಯುಧಗಳನ್ನು ಇಡುವ ಶಸ್ತ್ರಾಗಾರ, ಕೈದಿಗಳನ್ನು ಇಡುವ ಸೆರೆಮನೆಯಾಗಿ ಉಪಯೋಗಿಸಲ್ಪಡುತ್ತಿತ್ತು. ಮುಂದೆ ಕಲ್ಲು ಹಾಸಿದ ಹಾದಿಯಲ್ಲಿ ನಡೆದರೆ ಗ್ರೇಟ್ ಕೋರ್ಟ್ ಯಾರ್ಡ್ ತಲುಪುತ್ತೇವೆ. ಅಲ್ಲಿ ಆ ಕೋಟೆಯ ನಿರ್ಮಾಣದ ನೇತೃತ್ವ ವಹಿಸಿದ್ದ ಸೈನ್ಯಾಧಿಕಾರಿ ಅಗಸ್ಟಿನ್‌ನ ಸ್ಮರಣಾರ್ಥವಾಗಿ ನಿಲ್ಲಿಸಿದ ಸ್ಮಾರಕವನ್ನು ಕಾಣಬಹುದು. ಅಂದು ಅದೆಷ್ಟೋ ಯುದ್ಧಗಳಿಗೆ, ಮದ್ದುಗುಂಡುಗಳ ಸಿಡಿತಕ್ಕೆ ಸಾಕ್ಷಿಯಾಗಿದ್ದ ಈ ಸ್ಥಳದಲ್ಲಿ ಇಂದು ಸುಮಾರು 800 ಜನ ವಾಸವಾಗಿದ್ದಾರೆ. ಅವರ ನಿತ್ಯದ ಅವಶ್ಯಕತೆಗಳಿಗೆ ಸಣ್ಣ ಪುಟ್ಟ ಕೆಫೆ, ಅಂಗಡಿಗಳಿದ್ದರೂ, ಹೆಚ್ಚಿನ ಸವಲತ್ತುಗಳು ಬೇಕೆಂದರೆ ಪಟ್ಟಣಕ್ಕೆ ಹೋಗಬೇಕು.

ಅಂದು ಮೋಡವಿದ್ದುದರಿಂದ ವಾತಾವರಣ ತಣ್ಣಗಿತ್ತು. ಹಸಿರ ಉದ್ಯಾನವನಗಳು, ಚಿಲಿಪಿಲಿಗುಟ್ಟುತ್ತಿದ್ದ ಹಕ್ಕಿಗಳು, ಆಡುತ್ತಿದ್ದ ಮಕ್ಕಳು, ಆ ಸ್ಥಳದ ಚಾರಿತ್ರಿಕ ಮಹತ್ವಗಳನ್ನು ವಿವರಿಸುತ್ತಿದ್ದ ಮಾರ್ಗದರ್ಶಿಯ ಹಿಂದೆ ತಲೆದೂಗುತ್ತಾ ನಡೆಯುತ್ತಿದ್ದ ಪ್ರವಾಸಿಗರ ಗುಂಪು ಇವುಗಳನ್ನೆಲ್ಲ ಹಾದು ಮುಂದೆ ಹೋದೆವು. ವಸ್ತು ಸಂಗ್ರಹಾಲಯಕ್ಕೆ ಭೇಟಿ ಇತ್ತು, ಆ ಸ್ಥಳದ ಇತಿಹಾಸದ ಬಗ್ಗೆ ಮಾಹಿತಿ ಪಡೆದುಕೊಂಡೆವು. ಹೀಗೆ ಒಂದರ್ಧ ಗಂಟೆ ಓಡಾಡಿದ ಮೇಲೆ ಬಂದು ತಲುಪಿದ್ದು ಕಿಂಗ್ಸ್ ಗೇಟ್ ಎಂಬ ಜಾಗಕ್ಕೆ. ಸಮುದ್ರ ಮಾರ್ಗದಿಂದ ಬಂದಿಳಿಯುತ್ತಿದ್ದ ರಾಜ, ರಾಣಿ ಹಾಗೂ ಗಣ್ಯ ವರ್ಗಕ್ಕೆ ಸೇರಿದ ವ್ಯಕ್ತಿಗಳಿಗೆ ಈ ದ್ವಾರದ ಮುಖಾಂತರ ಕೋಟೆಯೊಳಗೆ ಪ್ರವೇಶ ದೊರೆಯುತ್ತಿತ್ತಂತೆ. ಅಷ್ಟರಲ್ಲಾಗಲೇ ನಾವು ಹೆಚ್ಚು ಕಡಿಮೆ ಎಲ್ಲವನ್ನು ನೋಡಿದ್ದೆವು. ಮುಂದೆ ಕೆಲವು ಹಳೆಯ ಫಿರಂಗಿಗಳು, ಮಣ್ಣಿನ ದಪ್ಪ ತೇಪೆ ಇದ್ದ ಬಂಕರ್‌ಗಳು, ಅಳಿದುಳಿದ ಕಲ್ಲಿನ ಗೋಡೆಗಳನ್ನು ಹೊರತುಪಡಿಸಿ ಬೇರೇನೂ ಇರಲಿಲ್ಲ. ನಿಜವಾಗಿಯೂ ವಿಶ್ವ ಪರಂಪರೆಯ ಪಟ್ಟಿಗೆ ಸೇರಲು ಇದಕ್ಕೆ ಅಂತಹ ಅರ್ಹತೆ ಏನಿದೆಯೋ ನನಗೆ ಅರ್ಥವಾಗಲಿಲ್ಲ. ಇಡಿಯ ದ್ವೀಪವನ್ನು ಅಲ್ಲಲ್ಲಿ ನಿಂತು ಕೂತು ನಿಧಾನವಾಗಿ ಸುತ್ತು ಹಾಕಿ ಬರಲು ನಮಗೆ ಹಿಡಿದದ್ದು ಸುಮಾರು 3 ಗಂಟೆಗಳಷ್ಟೇ.

ಮನೆಗೆ ಬಂದು ಊಟ ಮುಗಿಸಿ ಮಗಳದೊಂದು ನಿದ್ರೆಯಾದ ಮೇಲೆ ಹೆಲ್ಸಿಂಕಿ ಕ್ಯಾಥೆಡ್ರೆಲ್ ಕಡೆ ಹೋದೆವು. ಬೆಳ್ಳಗಿನ ಹಸಿರು ಗುಮ್ಮಟಗಳಿದ್ದ, ಒಳಗೂ ಹೊರಗೂ ಯಾವುದೇ ಆಡಂಬರವಿಲ್ಲದೆ ತೀರಾ ಸರಳವಾಗಿದ್ದ ಇದು ರಾಜಧಾನಿಯ ಪ್ರಮುಖ ಕಟ್ಟಡ. ಎದುರು ವಿಶಾಲ ಸೆನೆಟ್ ಚೌಕ, ಅದರ ನಡುವೆ ರಾಜ ಎರಡನೇ ಅಲೆಕ್ಸಾಂಡರ್‌ನ ಕಂಚಿನ ಪ್ರತಿಮೆ. ಆತ ರಷ್ಯನ್ ಸಾಮ್ರಾಜ್ಯದ ರಾಜನಾಗಿದ್ದರೂ ಫಿನ್‌ಲ್ಯಾಂಡ್ ದೇಶದ ಭಾಷೆ, ಸಂಸ್ಕೃತಿಯ ಬೆಳವಣಿಗೆಗೆ ಪೂರಕವಾದ ಕಾರ್ಯಗಳನ್ನು ಮಾಡಿದ್ದನೆಂದು ಜನ ಇಂದಿಗೂ ಸ್ಮರಿಸುತ್ತಾರೆ. ಹತ್ತಿರದಲ್ಲೇ ಗವರ್ನಮೆಂಟ್ ಪ್ಯಾಲೇಸ್ ಎಂಬ ಹಳೆಯ ಕಟ್ಟಡ ಇದ್ದು, ಈಗ ರಾಷ್ಟ್ರಪತಿಗಳ ಭವಂತಿಯಾಗಿ ಮಾರ್ಪಾಡಾಗಿದೆ.

ಇದಲ್ಲದೆ ಪ್ರಖ್ಯಾತ ಹೆಲ್ಸಿಂಕಿ ವಿಶ್ವವಿದ್ಯಾಲಯ ಕೂಡ ಅಲ್ಲೇ ಸೆನೆಟ್ ಸ್ಕ್ವೇರ್‌ಗೆ ಸಮೀಪದಲ್ಲೇ ಇದೆ. ಬಿಸಿಲಿನ ದಿನಗಳಲ್ಲಿ ಕ್ಯಾಥೆಡ್ರೆಲ್‌ನ ಮೆಟ್ಟಿಲುಗಳ ಮೇಲೆ ಜನ ಕುಳಿತು ಹರಟೆ ಹೊಡೆಯುತ್ತಾರೆ, ಕಾಫಿ ಕುಡಿಯುತ್ತಾರೆ, ಐಸ್‌ಕ್ರೀಮ್ ಮೆಲ್ಲುತ್ತಾರೆ. ಸ್ನೇಹಿತರನ್ನು ಭೇಟಿಯಾಗಲು, ಕುಟುಂಬಸ್ಥರೊಂದಿಗೆ ಸಮಯ ಕಳೆಯಲು, ಇಲ್ಲವೇ ಮಕ್ಕಳಾಟಕ್ಕೂ ಈ ಜಾಗ ಹೇಳಿ ಮಾಡಿಸಿದಂತಿದೆ. ಕ್ರಿಸ್ಮಸ್ ಹತ್ತಿರ ಬಂತೆಂದರೆ ಇಲ್ಲಿ ಬೇರೆಯೇ ವಾತಾವರಣ ಸೃಷ್ಟಿಯಾಗುತ್ತದೆ. ಕತ್ತಲ ಸಂಜೆಗಳಲ್ಲಿ ದೀಪಗಳ ಜಗಮಗ. ದೊಡ್ಡ ಕ್ರಿಸ್ಮಸ್ ಮಾರುಕಟ್ಟೆ ತಲೆಯೆತ್ತುತ್ತದೆ. ಆ ಚಳಿಯ ದಿನಗಳಲ್ಲಿ ಜನರು ಬೆಚ್ಚಗಿನ ಕೋಟು, ಟೊಪ್ಪಿ, ಕೈಗವಸುಗಳನ್ನು ಧರಿಸಿಕೊಂಡು ಬಿಸಿ ಬಿಸಿ ಚಾಕಲೇಟ್‌ಗಳು, ವೇಫಲ್‌ಗಳು, ಗ್ಲೊಗ್ಗ್ ಎನ್ನುವ ಪೇಯ, ಚೀಸ್ ಮುಂತಾದ ತಿನಿಸುಗಳನ್ನು ಸವಿಯಲು ಆಗಮಿಸುತ್ತಾರೆ.

ನಾವು ನೋಡಿದ ಇನ್ನೊಂದು ಜಾಗವೆಂದರೆ ನಗರದ ಕೇಂದ್ರದಿಂದ, ಸ್ವಲ್ಪ ದೂರವಿದ್ದ ರಾಕ್ ಚರ್ಚ್. ಟಿಮೋ ಮತ್ತು ಟುಮೋ ಎನ್ನುವ ಸಹೋದರರು ಜೊತೆಯಾಗಿ 1969ರಲ್ಲಿ ಇದನ್ನು ನಿರ್ಮಿಸಿದರು. ಕಲ್ಲಿನ ಬೃಹತ್ ಬಂಡೆಯನ್ನು ಕೊರೆದು, ಅದನ್ನೇ ಗೋಡೆಯನ್ನಾಗಿ ಬಳಸಿ, ಮೇಲೊಂದು ದೊಡ್ಡ ತಾಮ್ರದ ಛಾವಣಿ ಹೊದೆಸಿ ಇದನ್ನು ಕಟ್ಟಲಾಗಿದೆ. ಬೆಳಕು ಚೆನ್ನಾಗಿ ಬರಲೆಂದು ಗೋಡೆಗೂ ಹಾಗೂ ಛಾವಣಿಗೂ ಮಧ್ಯ ಸ್ಕೈಲೈಟ್ ಉಂಗುರವಿದೆ. ಈ ಅಪರೂಪದ ರಾಕ್

